**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.**

ಸಿಸಿ ನಂಬರ್ **14 /2023**

| | | |
|---|---|---|
| ಸಾಕ್ಷಿಯ ಹೆಸರು | : ರಾಜು | ಸಿ.ಡಬ್ಲ್ಯು 2 |
| ತಂದೆಯ ಹೆಸರು | : ಪಾಂಡುರಂಗಪ್ಪ | ಪಿ.ಡಬ್ಲ್ಯು 1 |
| ವಯಸ್ಸು | : 3 9 ವರ್ಷ | |
| ಉದ್ಯೋಗ | : ವ್ಯವಸಾಯ | |
| ವಾಸ ಸ್ಥಳ | : ಗಂಟೆಕಣಿವೆ | |

ದಿನಾಂಕಃ**10-09-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ನನಗೆ ಚಾಸಾ-1, 3, 4 ಮತ್ತು ಆರೋಪಿತರ ಪರಿಚಯ ಇರುತ್ತದೆ. ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ದಿಃ21-08-2022 ರ ಸ್ಥಳ ಮತ್ತು ಅಮಾನತ್ತು ಪಂಚನಾಮೆಯ ಮೇಲಿನ ಸಹಿ ನನ್ನದೇ ಇರುತ್ತದೆ. ಅದನ್ನು ಈಗ ಎರಡು ವರ್ಷಗಳ ಹಿಂದೆ ಮಾಡಿದ್ದೇನೆ. ಆರೋಪಿತರು ಮತ್ತು ಚಾಸಾ-1 ಇವರ ನಡುವೆ ಎಳನೀರು ಕಿತ್ತುವ ವಿಚಾರದಲ್ಲಿ ಗಲಾಟೆ ಆದ ಸಂಬಂದ ಪೊಲೀಸರು ಪಂಚನಾಮೆಗೆ ಬಂದಾಗ ಸಹಿ ಮಾಡಿರುತ್ತೇನೆ. ಚಾಸಾ-1 ರವರೇ ಗಲಾಟೆ ನಡೆದ ಸ್ಥಳವನ್ನು ಪೊಲೀಸರಿಗೆ ತೋರಿಸಿದ್ದಾರೆ. ಆ ಸಮಯದಲ್ಲಿ ಆರೋಪಿಗಳು ಕೃತ್ಯಕ್ಕೆ ಬಳಸಿದ್ದಾರೆ ಎನ್ನಲಾಗುವ ಒಂದು ಕಬ್ಬಿಣದ ರಾಡನ್ನು ಅಮಾನತ್ತುಪಡಿಸಿಕೊಂಡರು. ಅದನ್ನು ನೋಡಿದರೆ ಗುರುತಿಸುತ್ತೇನೆ. ನಾನು ಪಂಚನಾಮೆಗೆ ಸಹಿ ಹಾಕಿದಾಗ ಸಂಜೆ 4-30 ರಿಂದ 5 ಗಂಟೆ ಆಗಿರಬಹುದು. ಪಂಚನಾಮೆಯನ್ನು ನಿ.ಪಿ-1, ಸಾಕ್ಷಿಯ ಸಹಿಯನ್ನು ನಿ.ಪಿ-1(ಎ) ಎಂದು ಗುರುತಿಸಲಾಯಿತು. ಪೋಟೋವನ್ನು ಪಂಚನಾಮೆಯ ಕಾಲಕ್ಕೆ ತೆಗೆದಿದ್ದಾರೆ ಅದರಲ್ಲಿ ನಾನು ಮತ್ತು ಚಾಸಾ-1, 3 ಇದ್ದೇವೆ. ಸದರಿ ಪೋಟೋವನ್ನು ನಿ.ಪಿ-2 ಎಂದು ಗುರುತಿಸಲಾಯಿತು. ಕಬ್ಬಿಣದ ರಾಡನ್ನು ಮು.ಮಾ-1 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಚಾಸಾ-1 ನನ್ನ ಗೆಳೆಯ ಎಂದರೆ ಸರಿ. ಗಲಾಟೆ ನಡೆದ ವಿಚಾರವಾಗಿ ಪಂಚನಾಮೆ ಮಾಡುತ್ತಿರುವ ವಿಷಯವನ್ನು ನಿ.ಪಿ-1 ರಲ್ಲಿ ಬ ರೆಯುತ್ತಿದ್ದೇವೆ ಎಂದು ಪೋಲೀಸರು ನಮಗೆ ಹೇಳಿದ್ದಾರೆ. ಚಾಸಾ-3 ನನ್ನ ಮತ್ತು ಚಾಸಾ-1 ಇವರ ಗೆಳೆಯ ಎಂದರೆ ಸರಿ. ಕಷ್ಟದ ಸಮಯಗಳಲ್ಲಿ ನಾವುಗಳು ಒಬ್ಬರಿಗೊಬ್ಬರು ಸಹಾಯ ಮಾಡಿಕೊಂಡು ಬಂದಿದ್ದೇವೆ ಎಂದರೆ ಸರಿ. ಪೊಲೀಸರು ಪಂಚನಾಮೆ ಮಾಡಿರುವ ಜಮೀನಿನ ಸರ್ವೆ ನಂಬರ್ 80 ಇರಬಹುದು. ಸದರಿ ಜಮೀನು ಯಾರಿಗೆ ಸೇರಿದೆ ಎಂದು ನನಗೆ ಖಚಿತವಾಗಿ ಗೊತ್ತಿಲ್ಲ, ಆದರೆ ಸರಸ್ವತಿ ಅವರಿಗೆ ಸೇರಿರಬಹುದು. ನಾನು ಆ ಸಂಬಂಧ ಯಾವುದೇ ದಾಖಲೆಗಳನ್ನುನೋಡಿಲ್ಲ. ಸದರಿ ಜಮೀನಿನ ಸಂಬಂದ ತರೀಕೆರೆ ಸಿವಿಲ್ ನ್ಯಾಯಾಲಯದಲ್ಲಿ ಚಾಸಾ-1

ಮತ್ತು ಆರೋಪಿತರ ನಡುವೆ ಸಿವಿಲ್ ವ್ಯಾಜ್ಯ ಚಾಲ್ತಿಯಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಸಿವಿಲ್ ವ್ಯಾಜ್ಯ ಇರುವ ಕಾರಣ ಆರೋಪಿತರು ಮತ್ತು ಚಾಸಾ-1 ಇವರ ನಡುವೆ ಮನಸ್ತಾಪಗಳು ಇದ್ದು ಅವರ ಸಂಬಂದಗಳು ಚೆನ್ನಾಗಿಲ್ಲ ಎಂದರೆ ಸರಿ. ಪಂಚನಾವೆ ಮಾಡಿರುವ ವಿಷಯದ ಬಗ್ಗೆ ಮಾತ್ರ ನನಗೆ ವೈಯಕ್ತಿಕವಾಗಿ ಮಾಹಿತಿ ಇದೆ ಉಳಿದ ವಿಷಯಗಳನ್ನು ಚಾಸಾ-1 ರವರಿಂದ ತಿಳಿದುಕೊಂಡಿದ್ದೇನೆ. ಈ ಜಮೀನಿನ ಅಕ್ಕಪಕ್ಕದಲ್ಲಿ ಕೃಷಿ ಜಮೀನುಗಳು ಇವೆ ಎಂದರೆ ಸರಿ, ಅದರಲ್ಲಿ ಒಂದು ನಮಗೆ ಸೇರಿದೆ ಮತ್ತೊಂದು ಶಹನಯ್ಯ ಅವರಿಗೆ ಸೇರಿರುತ್ತದೆ. ಸರ್ವೆ ನಂಬರ್ 80 ರಲ್ಲಿ ಕಂದಸ್ವಾಮಿ ಇವರಿಗೂ ಕೂಡ ಸ್ವಲ್ಪ ಜಮೀನು ಇದೆ ಎಂದರೆ ಸರಿ. ಜಮೀನಿನ ಗುರುತಿಸುವಿಕೆ ಬಗ್ಗೆ ಚಾಸಾ-1 ಮತ್ತು ಆರೋಪಿಗಳ ನಡುವೆ ವ್ಯಾಜ್ಯ ಚಾಲ್ತಿಯಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಈ ಕಾರಣಕ್ಕೆ ಆರೋಪಿಗಳ ಮೇಲೆ ಸುಳ್ಳು ಪ್ರಕರಣ ದಾಖಲೆ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತ್ತು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ-1 ನನ್ನ ಗೆಳೆಯ ಇರುವ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ :</u> ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.